ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಯಲಹಂಕ ವಲಯ

ಸಂಖ್ಯೆ:ಬೃ.ಬೆಂ.ಮ.ಪಾ/ಕಾ.ಪಾ.ಅ/ತಾಂ.ಮ/ಬ್ಯಾ.ವಿ/ಪಿ.ಆರ್/45/2020-21

ಕಾರ್ಯಪಾಲಕ ಅಭಿಯಂತರರು ಕಛೇರಿ
ಬ್ಯಾಟರಾಯನಪುರ ವಿಭಾಗ
ಬೆಂಗಳೂರು -92
ದಿನಾಂಕ: 16-02-2022

ತಾಂತ್ರಿಕ ಮಂಜೂರಾತಿ

ವಿಷಯ: Improvements of road and drains in Balaji layout and Surrounding areas in ward no:08 Kodigehalli.

* * * * *

ಮೇಲಿನ ವಿಷಯ ಹಾಗೂ ಉಲ್ಲೇಖದಲ್ಲಿ ತಿಳಿಸಿರುವ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗ ಯಲಹಂಕ ವಲಯರವರು 2021-22ನೇ ಸಾಲಿನ **POW** ಆಯವ್ಯಯದ ಪಿ-ರಡಿಯಲ್ಲಿ ತಾಂತ್ರಿಕ ಮಂಜೂರಾತಿಯನ್ನು ಕೋರಿರುವ ಮೇರೆಗೆ, ಮಾನ್ಯ ಆಯುಕ್ತರು ನಿಯೋಜಿಸಿರುವ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂ:ಬಿ12(1)ಪಿ.ಆರ್/394/2020-21, ದಿನಾಂಕ:04-02-2021ರಂತೆ ಸದರಿ ಕಾಮಗಾರಿಗೆ ರೂ.12.00 ಲಕ್ಷಗಳಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದೆ ಮತ್ತು ತಾಂತ್ರಿಕ ಮಂಜೂರಾತಿಯ ಪುಸ್ತಕದ ಪುಟ ಸಂಖ್ಯೆ 14 ಕ್ರಮ ಸಂಖ್ಯೆ 45 ರಲ್ಲಿ ನಮೂದಿಸಿ, ಈ ಕೆಳಗಿನ ಷರತ್ತುಗಳಿಗೊಳಪಡಿಸಿ ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

ಷರತ್ತುಗಳು:

1. ಮಾನ್ಯ ಆಯುಕ್ತರವರ ಕಛೇರಿ ಸುತ್ತೋಲೆ ಸಂಖ್ಯೆ : ಆಯುಕ್ತರು/ಪಿಆರ್/176/15-16 ದಿನಾಂಕ: 22.12.2015 ರ ಆದೇಶದ ಮೇರೆಗೆ ಸದರಿ ಕಾಮಗಾರಿಯನ್ನು ಇನ್ಯಾವುದೆ ಅನುದಾನದ ಯೋಜನೆಯಲ್ಲಿ ಕೈಗೆತ್ತಿಗೊಂಡಿರುವುದಿಲ್ಲವೆಂದು ಅಥವಾ ಕಾಮಗಾರಿಗಳು ಪುನಾರವರ್ತಿತವಾಗಿಲ್ಲವೆಂದು ಹಾಗೂ ಈಗಾಗಲೇ ಚಾಲ್ತಿಯಲ್ಲಿರುವ/ಪೂರ್ಣಗೊಂಡಿರುವ ಕಾಮಗಾರಿಗಳು ಅಥವಾ ಲೋಕಾಯುಕ್ತ / ಯಾವುದೇ ಇಲಾಖಾ ವಿಚಾರಣೆ ಹಂತದಲ್ಲಿರುವ ಕಾಮಗಾರಿಗಳು ಸದರಿ ಕ್ರಿಯಾಯೋಜನೆಯಲ್ಲಿ ಸೇರ್ಪಡೆಮಾಡಿರುವುದಿಲ್ಲವೆಂದು ಅಥವಾ ಪುನರಾವರ್ತಿತವಾಗಿಲ್ಲವೆಂದು, ಕಾಮಗಾರಿ ಪ್ರಾರಂಭವಾಗುವ ಪೂರ್ವದಲ್ಲೇ ಸಂಬಂಧಪಟ್ಟ ಕಾ.ಪಾ.ಅ/ಸ.ಕಾ.ಪಾ.ಅ/ವಾರ್ಡ್ ಅಭಿಯಂತರವರು ಸ್ಥಳ ಪರಿಶೀಲಿಸಿ ದೃಢೀಕರಿಸಿ, ಖಚಿತಪಡಿಸಿಕೊಂಡ ನಂತರವಷ್ಟೆ ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಷರತ್ತಿಗೊಳಪಡಿಸಿದೆ.
2. ಈಗ ತಾಂತ್ರಿಕ ಮಂಜೂರಾತಿ ನೀಡಲಾಗಿರುವ ಯಾವುದೇ ಕಾಮಗಾರಿ ಬೇರೆ ಯಾವುದೇ ಇಲಾಖೆ ಅಥವಾ ಯೋಜನೆಯಡಿ ಸೇರಿಸಿ ಅನುಷ್ಠಾನಗೊಳಿಸಿದ್ದಲ್ಲಿ ಆ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತಿಲ್ಲ.
3. ಪ್ರತಿ ಕಾಮಗಾರಿಯ ಪ್ರಾರಂಭಕ್ಕೆ ಮುನ್ನಾ ಛಾಯಾ ಚಿತ್ರವನ್ನು ತೆಗೆದು ಈ ಕಛೇರಿಗೆ ಹಾಜರ್ ಪಡಿಸತಕ್ಕದ್ದು ಹಾಗೂ ಕಾಮಗಾರಿ ಪ್ರಗತಿಯಲ್ಲಿರುವಾಗ ಮತ್ತು ಪೂರ್ಣಗೊಂಡ ನಂತರ ಪುನಃ ಛಾಯಾ ಚಿತ್ರ ತೆಗೆದು ಪರಿಶೀಲನೆ ಸಮಯದಲ್ಲಿ ಈ ಛಾಯಾ ಚಿತ್ರಗಳನ್ನು ಹಾಜರುಪಡಿಸತಕ್ಕದ್ದು/ಕಡತದಲ್ಲಿ ಇರಿಸತಕ್ಕದ್ದು.
4. ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ದರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
5. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ-1999 ಮತ್ತು ನಿಯಮ-2000 ಹಾಗೂ ಸರ್ಕಾರ ನಿಗಧಿಪಡಿಸಿರುವ Standard Bidding Documents ಅನ್ನು ಅಳವಡಿಸಿಕೊಂಡು ನಿರ್ವಹಿಸುವುದು.

ಪುತಿನೋ...

6. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಟೆಂಡರ್ ಅನುಮೋದನೆ ಪಡೆಯುವುದು.
7. ಇಡಿಗಂಟು (Lumpsum/Miscellaneous Amt) ವೆಚ್ಚದ ಸಮಯದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.
8. ಸಕ್ಷಮ ಪ್ರಾಧಿಕಾರದಿಂದ ಕರಡು ಟೆಂಡರ್ ಪ್ರತಿಯನ್ನು ಅನುಮೋದನೆ ಪಡೆಯುವುದು.
9. ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
10. ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೋಟೇಶನ್ ಕರೆದು ಅನುಮೋದನೆ ಪಡೆಯುವುದು.
11. ರಸ್ತೆ ಇತಿಹಾಸ ಪುಸ್ತಕದಲ್ಲಿ ಕಾಮಗಾರಿಯ ಕೆಲಸಗಳಾದ ಚಿಪ್‌ಕಾರ್ಪೆಟಿಂಗ್, ಜೆಲ್ಲಿರಸ್ತೆ, ಡಾಂಬರೀಕರಣದ ಕೆಲಸವನ್ನು ನಮೂದಿಸುವುದು.
12. ರಸ್ತೆಗೆ ಬಿ.ಎಂ/ ಡಿ.ಬಿ.ಎಂ ಹಾಕಿದ್ದಲ್ಲಿ Benkelman Beam Deflection reportನ್ನು ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ.

16/12

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ
ಬಿ.ಬಿ.ಎಂ.ಪಿ ಬೆಂಗಳೂರು-92

ಪ್ರತಿಯನ್ನು:

16/12

1) ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ
2) ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ
3) ಸಹಾಯಕ ಹಣಕಾಸು ನಿಯಂತ್ರಕರು, ಬಿಬಿಎಂಪಿ ರವರ ಮಾಹಿತಿಗಾಗಿ
4) ಮುಖ್ಯ ಲೆಕ್ಕಾಧಿಕಾರಿಗಳು, ಬಿಬಿಎಂಪಿ ರವರ ಮಾಹಿತಿಗಾಗಿ